**<u>ದಿನಾಂಕಃ  31.08.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಎಂ.ಎಸ್.ವಿ., ಪ್ರತಿವಾದಿ ಪರ ವಕೀಲರಿಂದ</u>

ನಾನು 4 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ತವರು ಮನೆ ಕೆನ್ನೆಡಲು ಗ್ರಾಮ ಆಗಿರುತ್ತದೆ. ನನ್ನ ಅತ್ತೆ ಸರೋಜಮ್ಮ ರವರ  ತವರು ಮನೆ ತಳಕು ಗ್ರಾಮ ಅಗಿರುತ್ತದೆ.  ನನ್ನ ಅತ್ತೆಯ ತಂದೆಯ ಹೆಸರು ಗುರುಸಿದ್ದಪ್ಪ. ಅವರು ಯಾವ ಜನಾಂಗಕ್ಕೆ ಸೇರಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರು ಲಿಂಗಾಯಿತ ಜನಾಂಗಕ್ಕೆ ಸೇರಿರುತ್ತಾರೆ ಎಂದು ನುಡಿಯುತ್ತಾರೆ.  ನನ್ನ ಅತ್ತೆ ಅವರ ತವರು  ಊರಿನಲ್ಲಿಯೇ ಬೆಳೆದು ಓದಿರುತ್ತಾರೆ. ನನ್ನ ಅತ್ತೆಯ ತಂದೆಯ ಹೆಸರು ಗುರುಸಿದ್ದಪ್ಪ ಅವರೇ ಸ್ವತಃ ನನಗೆ ಹೇಳಿರುತ್ತಾರೆ.

ನನ್ನ ಅತ್ತೆಯ ತವರು ಮನೆಯವರು ಕಟ್ಟಾ ಸಂಪ್ರದಾಯಸ್ಥರು ಎಂದರೆ ಸರಿ.  ನನ್ನ ಮಾವನಾದ ರಾಮಚಂದ್ರಪ್ಪ ರವರು ಮ್ಯಾಸನಾಯಕ ಜನಾಂಗಕ್ಕೆ ಸೇರಿದವರಾಗಿರುತ್ತಾರೆ ಎಂದರೆ ಸರಿ.





ರಾಮಚಂದ್ರಪ್ಪನವರ ಹೆಂಡತಿ ಅಂದರೆ 4 ನೇ ಪ್ರತಿವಾದಿ ಅವರೂ ಸಹ ಮ್ಯಾಸನಾಯಕ ಜನಾಂಗಕ್ಕೆ ಸೇರಿದವರಾಗಿರುತ್ತಾರೆ ಎಂದರೆ ಸರಿ.  ನನ್ನ ಅತ್ತೆ ಸರೋಜಮ್ಮ ರವರು ಜೀವಂತ ಇರುವಾಗ ಅವರ ಮದುವೆಗೆ ಸಂಬಂಧಪಟ್ಟಂತೆ ನನಗೆ ಏನೂ ತಿಳಿಸಿರುವುದಿಲ್ಲ. ನನ್ನ ಅತ್ತೆ ಸರೋಜಮ್ಮನವರಿಗೆ ಒಟ್ಟು 3 ಜನ ಮಕ್ಕಳು ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರೆದು ಕೇವಲ ಇಬ್ಬರು ಮಕ್ಕಳಿದ್ದು ಅವರ ಹೆಸರು ರಾಜೇಶ್ವರಿ ಹಾಗೂ ವೀರೇಶ್ ಅಂತ ಇರುತ್ತದೆ ಅಂತ ನುಡಿಯುತ್ತಾರೆ. ಅವರಿಗೆ ನಾಗರಾಜ ಅಂತ ಇನ್ನೊಬ್ಬ ಮಗನಿದ್ದ ಎಂದರೆ ಸರಿಯಲ್ಲ.

ನನ್ನ ಅತ್ತೆ ಸರೋಜಮ್ಮನವರ ಗಂಡನ ಹೆಸರು ಪೂಜಾರಿ ಚೆನ್ನಪ್ಪ ಎಂದರೆ ಸರಿ.  ಸದರಿ ಪೂಜಾರಿ ಚೆನ್ನಪ್ಪ ರವರು ಲಿಂಗಾಯಿತ ಜನಾಂಗಕ್ಕೆ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ.  ಸದರಿ ಪೂಜಾರಿ ಚೆನ್ನಪ್ಪ  ದೊಡ್ಡೇರಿ ಗ್ರಾಮದ ಚಿಕ್ಕೇರಪ್ಪನ  3 ನೇ ಮಗ ಎಂದರೆ ನನಗೆ  ಗೊತ್ತಿಲ್ಲ.

ಪೂಜಾರಿ ಚೆನ್ನಪ್ಪನ ಅಣ್ಣತಮ್ಮಂದಿರು ಹಾಗೂ ಅವರ ಮಕ್ಕಳು ಈಗಲೂ ಸಹ ದೊಡ್ಡೇರಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದೊಡ್ಡೇರಿ ಗ್ರಾಮದಲ್ಲಿ ಗೌರಮ್ಮನ ಜಾತ್ರೆಯನ್ನು ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾತ್ರೆಗೆ ನನ್ನ ಅತ್ತೆ ಸರೋಜಮ್ಮ ಹಾಗೂ ಅವರ ಮಗಳಾದ ರಾಜೇಶ್ವರಿ ಪ್ರತೀ ವರ್ಷ ಜಾತ್ರೆಗೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಪೂಜಾರಿ ಚೆನ್ನಪ್ಪ, ಸರೋಜಮ್ಮ, ರಾಜೇಶ್ವರಿ, ನಾಗರಾಜ್ ಹಾಗೂ ವೀರೇಶ್ ಇವರು ಒಂದು ಕುಟುಂಬ ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ ರಾಮಚಂದ್ರಪ್ಪ, ನಿಂಗಮ್ಮ, ಶಿವಣ್ಣ ಹಾಗೂ ಪಾಪಣ್ಣ ಇವರು ಒಂದು ಕುಟುಂಬ ಎಂದರೆ ಸರಿ.

ಸರೋಜಮ್ಮ ಹಾಗೂ ರಾಮಚಂದ್ರಪ್ಪ ರವರ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪೂಜಾರಿ ಚೆನ್ನಪ್ಪ ಮತ್ತು ಸರೋಜಮ್ಮನ ಸೊಸೆ ಎಂದರೆ ಸರಿಯಲ್ಲ. ಸರೋಜಮ್ಮನ ಮೊದಲನೇ ಮಗ ನಾಗರಾಜ ಇವರು 10 ನೇ ವರ್ಷದಲ್ಲಿದ್ದಾಗ ಹಾವು ಕಡಿದು ದೊಡ್ಡೇರಿ ಗ್ರಾಮದಲ್ಲಿ ತೀರಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸರೋಜಮ್ಮನ ಮಗಳು ರಾಜೇಶ್ವರಿ ಈಗಲೂ ಜೀವಂತ ಇದ್ದಾಳೆ ಎಂದರೆ ಸರಿ. ಸರೋಜಮ್ಮನ ತಮ್ಮ ಮಹೇಶ್ ಎಂಬುವವರು ಚಿತ್ರದುರ್ಗದಲ್ಲಿ ಒಂದು ಹೋಟೆಲ್ ಇಟ್ಟುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.



ನನಗೂ ಹಾಗೂ ರಾಮಚಂದ್ರಪ್ಪ ಇವರ ಮಧ್ಯೆ ಯಾವುದೇ ಸಂಬಂಧ ಇರುವುದಿಲ್ಲ ಆದ್ದರಿಂದ ಮೃತ್ಯು ಪತ್ರವನ್ನು ಮಾಡುವ ಪ್ರಮೇಯ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.